''ಯಾರು ಸದಾ ಪ್ರಾರ್ಥನಾಶೀಲನಾಗಿರುತ್ತಾನೆಯೋ ಅವನ ಜೀವನದಲ್ಲಿ ಕಷ್ಟಗಳು ಸೇತುವೆಯ ಕೆಳಗಿನ ನೀರಿನಂತೆ ಹೊರಟುಹೋಗುತ್ತವೆ.''

''ನನ್ನ ಕರುಣೆಯನ್ನು ಪಡೆಯದವನು ನಿಜಕ್ಕೂ ದುರದೃಷ್ಟ ವಂತ. ನಾನು ಕರುಣೆ ತೋರದ ಯಾವ ವ್ಯಕ್ತಿಯೂ ಇಲ್ಲ, ಅಷ್ಟೇಕೆ ಒಂದು ಕೀಟವೂ ಇಲ್ಲ.''[೩]

''ನೀನು ಮಾಡುವ ಕೆಲಸ ಕಾರ್ಯಗಳನ್ನೆಲ್ಲ ಭಗವಂತನ ಸೇವೆ ಎಂದು ಭಾವಿಸು. ಜೊತೆಯಲ್ಲಿ ಶುದ್ಧ ಭಕ್ತಿಗಾಗಿ ಭಗ ವಂತನಲ್ಲಿ ಪ್ರಾರ್ಥಿಸು.''

''ಹೆದರಬೇಡ ಮಗು, ಶ್ರೀರಾಮಕೃಷ್ಣರು ಸದಾ ನಿನ್ನೊಡ ನಿದ್ದಾರೆ ಎಂದು ನೆನಪಿಡು. ನಾನೂ ನಿನ್ನ ಜೊತೆಯಲ್ಲೇ ಇದ್ದೇನೆ. ನನ್ನನ್ನು ನೆನೆಸಿಕೊಳ್ಳುತ್ತಿದ್ದರೆ ನೀನೇಕೆ ಹೆದರಬೇಕು?''[೪]

ಶ್ರೀಮಾತೆಯವರ ಕುರಿತಾದ ಭಜನೆಗಳು ನಮ್ಮ ಇನ್ನೊಂದು ಆಸ್ತಿ. ಅವನ್ನು ರಾಗ ತಾಳ ಲಯಸಹಿತವಾಗಿ ಮತ್ತೆ ಮತ್ತೆ ಭಜಿಸು ವುದರಿಂದ ಮನಸ್ಸು ಸ್ಥಿರವಾಗುತ್ತದೆ. ಪ್ರೇಮ ಭಕ್ತಿ ಶ್ರದ್ಧೆಗಳೆಂಬ ದಿವ್ಯ ಫಲಗಳು ಲಭಿಸುತ್ತವೆ. ಶ್ರೀರಾಮಕೃಷ್ಣರು ಭಗವಂತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕೆಂದು ಆದೇಶಿಸಿದ್ದಾರೆ. ಭಕ್ತವೃಂದದೊಡನೆ ತಾವೂ ಒಂದಾಗಿ ಭಜನೆ ಸಂಕೀರ್ತನೆ ನರ್ತನಗಳಲ್ಲಿ ಭಾಗವಹಿಸಿ ಭಗವನ್ನಾಮ ಸಂಕೀ ರ್ತನೆಯ ಸಾಧನಾ ಮಾರ್ಗವನ್ನು ವ್ಯಾಪಕವಾಗಿ ಪ್ರಚುರಪಡಿಸಿ ಭಜನೆಯ ಮತ್ತನ್ನು ಪರಿಚಯಿಸಿದ್ದಾರೆ. ಶ್ರೀಮಾತೆಯವರ ಭಜನೆ ಗಳ ಅನುಸಂಧಾನದಿಂದ ನಾವೂ ಶ್ರೀಮಾತೆಯವರ ಅಲೌಕಿಕ ಆಸ್ತಿಗೆ ಭಾಗಿದಾರರಾಗುತ್ತೇವೆ.

ಶ್ರೀಮಾತೆಯವರ ನಾಮವನ್ನು ಮತ್ತೆ ಮತ್ತೆ ಹೇಳುತ್ತ ಅಥವಾ ಅವರೇ ಆದೇಶಿಸಿದಂತೆ 'ಅಮ್ಮಾ' ಎಂಬ ಮಂತ್ರದಿಂದ ಅವರನ್ನು ಪುನಃ ಪುನಃ ಕರೆಯುತ್ತ ಅವರ ನಾಮವನ್ನು ಅನು ಸಂಧಾನ ಮಾಡುವುದೂ ನಮ್ಮ ಒಂದು ಆಸ್ತಿ. ನಾಮ-ನಾಮಿ ಅಭಿನ್ನವಾದ್ದರಿಂದ ಅವರ ನಾಮದ ಸ್ಮೃತಿ ನಮಗೆ ಅವರ ಪಾವನ ಸಾನ್ನಿಧ್ಯಸುಖವನ್ನೇ ಅನುಗ್ರಹಿಸುತ್ತದೆ.

ಶ್ರೀಮಾತೆಯವರ ಧ್ಯಾನ ನಮ್ಮ ಇನ್ನೊಂದು ಅಮೂಲ್ಯ ಆಸ್ತಿ .

**ಧ್ಯಾಯೇತ್ ಹೃದಂಬುಜೇ ದೇವೀಂ ತರುಣಾರುಣವಿಗ್ರಹಾಂ ।**
**ವರಾಭಯಕರಾಂ ಶಾಂತಾಂ ಸ್ಮಿತೋತ್ಫುಲ್ಲಮುಖಾಂಬುಜಾಮ್ ॥**

ನಾವು ಸ್ಥಿರವಾಗಿ ಕುಳಿತುಕೊಳ್ಳಬೇಕು. ಪ್ರಾಣ ಮನ ಬುದ್ಧಿ ಗಳನ್ನು ಸ್ಥಿರಗೊಳಿಸಿಕೊಳ್ಳಬೇಕು. ಈಗ ಹೃದಯಪದ್ಮವನ್ನು ಭಾವಿಸಬೇಕು. ಅಲ್ಲಿ ಆಗ ತಾನೇ ಉದಯಿಸುತ್ತಿರುವ ತರುಣ ಅರುಣನ ತೇಜಸ್ಸಿನಿಂದ ಕೂಡಿದ, ವರ ಅಭಯಕರಳಾದ, ಸ್ಮಿತಮುಖ ಅಂಬುಜದಿಂದ ಸುಶೋಭಿತರಾದ ಪರಮಶಾಂತ ರಾದ ದೇವೀ ಶ್ರೀಮಾತೆಯವರನ್ನು ಧ್ಯಾನಿಸಬೇಕು. ಮನಸ್ಸು ಧ್ಯಾನದಲ್ಲಿ ಸ್ಥಿರವಾಗಲು ಬಹಳ ಹೋರಾಡಬೇಕು. ಆದರೆ ಮನಸ್ಸು ಧ್ಯಾನದಲ್ಲಿ ಅತ್ಯಲ್ಪ ಕ್ಷಣಗಳು ಸ್ಥಿರವಾದರೂ ಅಗಾಧ ಆನಂದ ನಮ್ಮದಾಗುತ್ತದೆ. ಅದರೆದುರು ಇಡೀ ಜಗತ್ತು ಯಃಕಶ್ಚಿತ್ ಆಗಿ ಹೋಗುತ್ತದೆ. ಶ್ರೀಮಾತೆಯವರ ಧ್ಯಾನ ಸಾಂತಕ್ಕೂ ಅನಂತಕ್ಕೂ ನಡುವಿನ ಕೊಂಡಿ. ಶ್ರೀಮಾತೆಯವರ ಧ್ಯಾನ ನಮ್ಮ ಮನ, ಬುದ್ಧಿಗಳನ್ನು ಪವಿತ್ರಗೊಳಿಸಿ ಉನ್ನತ ಸ್ತರಕ್ಕೇರಿಸುತ್ತದೆ, ನಮ್ಮ ಜೀವನಗಳನ್ನು ಉದ್ದೀಪ್ತಗೊಳಿಸುತ್ತದೆ.

ಹೀಗೆ ಶ್ರೀಮಾತೆಯವರ ಶ್ರೀ ಭಾವಚಿತ್ರ, ಅವರ ಜೀವನ ಚರಿತ್ರೆ , ಸಂದೇಶಗಳು, ಅವರ ಭಜನೆ, ನಾಮಜಪ ಮತ್ತು ಧ್ಯಾನ ಗಳೆಂಬ ವ್ಯಕ್ತ ಆಸ್ತಿಯನ್ನು ಹಿಡಿದುಕೊಂಡು ನಾವು ಜ್ಞಾನ, ಭಕ್ತಿ, ಪ್ರೇಮ, ಭಾವ, ಮೋಕ್ಷಗಳೆಂಬ ಅವ್ಯಕ್ತ ಅಲೌಕಿಕ ಆಸ್ತಿಯನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಎಷ್ಟೋ ಬಾರಿ ಇಂತಹ ಅಮೂಲ್ಯ ಆಸ್ತಿ ನಮ್ಮ ಬಳಿಯಿದ್ದೂ ಸಂಕಟಗಳ ಸುಳಿಯಲ್ಲಿ ತತ್ತರಿಸಿದಾಗ, ಸಾಧನೆಯ ಹೋರಾಟದ ಕ್ಷಣಗಳಲ್ಲಿ ಬಳಲುವಾಗ ಪ್ರಮಾದ ವಶರಾಗಿ ಅವುಗಳಿಂದ ಸದುಪಯೋಗ ಪಡೆಯುವುದಿಲ್ಲ. ಹಾಗೆ ಆಗದಿರಲಿ. ಅದಕ್ಕಾಗಿ ಶ್ರೀಮಾತೆಯವರನ್ನು ಅಪಾರವಾಗಿ ಪ್ರೀತಿಸಬೇಕು. ಆ ಪ್ರೀತಿ ನಮ್ಮನ್ನು ಮೇಲೆತ್ತುತ್ತದೆ. ಇನ್ನೊಂದು ಮಾತು, ನಾವು ಯಾವ ಆಸ್ತಿಯನ್ನು ಪಡೆದು ಧನ್ಯರಾಗಿ ದ್ದೇವೆಯೋ, ಕೃತಕೃತ್ಯರಾಗಿದ್ದೇವೆಯೋ ಆ ಸಂಪತ್ತನ್ನು ನಮ್ಮ ಸಂಪರ್ಕಕ್ಕೆ ಬಂದ ಅಧಿಕಾಧಿಕ ವ್ಯಕ್ತಿಗಳಿಗೆ ತಲುಪಿಸುವ ಪ್ರಯತ್ನ ವನ್ನು ಮಾಡುವುದೂ ಅಷ್ಟೇ ಆವಶ್ಯಕ. ನಮ್ಮ ಆನಂದವನ್ನು ಹಂಚಿದಾಗಲೂ ನಮಗೆ ಅತ್ಯಧಿಕ ಆನಂದವಾಗುತ್ತದೆ.

ಹೀಗೆ ಶ್ರೀಮಾತೆಯವರು ನಮಗೆ ಅಗಣಿತ ಆಸ್ತಿಗಳನ್ನು ಧಾರೆಯೆರೆದಿರುವಾಗ ಅವು ''ಹೃದಯ ಮಂದಿರದ ಅಂಗಳ ದಲ್ಲಿ ಚದುರಿ ಬಿದ್ದಿರಲು'' ನಾವು ಜಗದ ಬೀದಿಗಳಲ್ಲಿ ಭಿಕ್ಷುಕ ರಂತೆ ಅಲೆಯುವುದು ಸರಿಯೆ? ನಾವು ಶ್ರೀಮಾತೆಯವರ ''ಮುತ್ತು ರತುನಗಳ, ಪಚ್ಚೆ ಹರಳುಗಳ'' ವಾರಸುದಾರರಾಗಿ ಜಗತ್ತಿನ ಗಾಜಿನ ಚೂರುಗಳಿಗಾಗಿ ಹುಚ್ಚರಾಗುವುದು ಎಷ್ಟು ಸರಿ?

**ಜಗದ ಬವಣೆಗಳೆಲ್ಲವ ಮರೆತು**
**'ಜೈ ಮಾ' ಎಂದೆನ್ನು**
**ಪಾಪದ ರಾಶಿಗೆ ಇಡು ನೀ ತಾಯಿಯ**
**ಸ್ಮರಣೆಯ ಬೆಂಕಿಯನು ।**

೩ ವಾತ್ಸಲ್ಯತೀರ್ಥ ಪು. ೧೬೬
೪ ಅಲ್ಲೇ, ಪು. ೧೭೮

# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 48

**ಸ್ವಾಮಿ ನಿತ್ಯಸ್ಥಾನಂದ**

### ರಾಗಾಭಕ್ತಿ

‘‘ರಾಗಾಭಕ್ತಿ ಅಂದರೆ ಅನುರಾಗ ಸಹಿತವಾದ ಭಕ್ತಿ ಉಂಟಾಯಿತು ಎಂದರೆ ಭಗವಂತನ ಹೃದಯ ಸುಮ್ಮನೆ ಇರಲಾರದು. ತನ್ನ ಭಕ್ತರ ಭಕ್ತಿ ಕಂಡರೆ ಆತನಿಗೆ ಎಷ್ಟು ಪ್ರೀತಿ ಗೊತ್ತೆ? ಹಸುವಿಗೆ ಹಿಂಡಿಯೊಡನೆ ನೆನೆಸಿದ ನೆಲ್ಲುಹುಲ್ಲು ಕಂಡರೆ ಎಷ್ಟು ಪ್ರೀತಿಯೋ ಅಷ್ಟು. ಅದು ‘ಗಬ ಗಬ’ ಅಂತ ತಿಂದುಬಿಡುತ್ತದೆ. *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೫-೪೬)*

ವಿಚಾರದ ಮೂಲಕ ಭಗವಂತನನ್ನು ಪಡೆಯಲಾಗುವುದಿಲ್ಲ ಎಂಬುದನ್ನು ನಾವು ವಿಚಾರದ ಮೂಲಕವೇ ತಿಳಿದುಕೊಳ್ಳಬೇಕು. ವಿಚಾರ ಮಾಡುತ್ತ ಹೋದಂತೆ ವಿಚಾರದ ರೆಕ್ಕೆಗಳು ಸೋತುಹೋಗುತ್ತವೆ. ಆಗ ಶರಣಾಗತಿಯ ಭಾವ ಉಂಟಾಗುತ್ತದೆ. **ನ ಜಾನಾಮಿ ಕಿಮಪ್ಯೇತದ್ ಇತ್ಯಂತೇ ಶರಣಂ ತವ** - ‘‘ಇದೇನೆಂದು ನನಗೆ ತಿಳಿಯಲಾಗುವುದಿಲ್ಲ ಎಂದು ನೀನು ಶರಣಾಗಬೇಕಾಗುತ್ತದೆ.’’ ಎಂದು ‘ಪಂಚದಶಿ’ಯು ಹೇಳುತ್ತದೆ. ಕಠೋಪನಿಷತ್ತಿನ ವಾಣಿ : *(೨.೨೩)*

**ನಾಯಮಾತ್ಮಾ ಪ್ರವಚನೇನ ಲಭ್ಯಃ**
**ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯ-**
**ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥**

‘ಆತ್ಮನು ಪ್ರವಚನದಿಂದ ಲಭ್ಯನಲ್ಲ; ಮೇಧಾಶಕ್ತಿಯಿಂದಲೂ ಬಹಳ ಶಾಸ್ತ್ರಾಧ್ಯಯನದಿಂದಲೂ ಲಭ್ಯನಲ್ಲ; ಯಾವನನ್ನು (ಆತ್ಮನನ್ನು) ಸಾಧಕನು ಹಂಬಲಿಸುತ್ತಾನೆಯೋ ಅವನಿಂದ (ಆತ್ಮನು) ಲಭ್ಯನು. ಅವನಿಗೆ ಈ ಆತ್ಮನು ತನ್ನ ಸ್ವರೂಪವನ್ನು ಪ್ರಕಾಶಪಡಿಸುತ್ತಾನೆ.’

ಕೆಲವು ಆಚಾರ್ಯರು **‘ಯಮೇವೈಷ ವೃಣುತೇ ತೇನ ಲಭ್ಯಃ’** ಎಂಬುದನ್ನು ‘ಯಾರ ಮೇಲೆ ಭಗವಂತನ ಅನುಗ್ರಹ ವುಂಟಾಗುವುದೋ ಅವನಿಂದ ಭಗವಂತನನ್ನು ಪಡೆಯಲು ಸಾಧ್ಯ’ ಎಂದು ವ್ಯಾಖ್ಯಾನಿಸುತ್ತಾರೆ. ಈ ಎರಡೂ ಅಭಿಪ್ರಾಯಗಳನ್ನು ಈ ರೀತಿ ಹೊಂದಿಸಬಹುದು: ‘ಯಾವ ಭಕ್ತನು ಭಗವಂತನಿಗಾಗಿ ವ್ಯಾಕುಲ (ವೃಣುತೇ)ಪಡುತ್ತಾನೊ ಅವನೆಡೆಗೆ ಭಗವಂತನು ಓಡಿ ಬರುತ್ತಾನೆ.’ ಅದಕ್ಕಾಗಿಯೇ ಶ್ರೀರಾಮಕೃಷ್ಣರು ಹೇಳಿದುದು: ‘‘(ಭಕ್ತನಲ್ಲಿ) ಅನುರಾಗಸಹಿತವಾದ ಭಕ್ತಿ ಉಂಟಾಯಿತು ಎಂದರೆ ಭಗವಂತನ ಹೃದಯ ಸುಮ್ಮನೆ ಇರಲಾರದು’’ ಎಂದು ಮುಂತಾಗಿ.

**ಶ್ರೀರಾಮಕೃಷ್ಣರು:** ‘‘ರಾಗಾಭಕ್ತಿ ಎಂಬುದು ಶುದ್ಧ ಭಕ್ತಿ, ಅಹೇತುಕ ಭಕ್ತಿ. ಉದಾಹರಣೆಗೆ ಪ್ರಹ್ಲಾದನದು. ಒಂದು ಪಕ್ಷ ನೀನು ಒಬ್ಬ ಧನಿಕನ ಹತ್ತಿರಕ್ಕೆ ದಿವಸವೂ ಹೋಗುತ್ತಿದ್ದೀಯೆ, ಆದರೆ ಅವನಿಂದ ಮಾತ್ರ ಏನನ್ನೂ ಅಪೇಕ್ಷಿಸುತ್ತಿಲ್ಲ. ಸುಮ್ಮನೆ ಆತನ ದರ್ಶನ ಪಡೆಯಲು ಮಾತ್ರ ಹೋಗುತ್ತಿದ್ದೀಯೆ ಅಂತ ಇಟ್ಟುಕೊ. ಆತನೇನಾದರೂ ನಿನಗೆ ಉಪಕಾರ ಮಾಡಲು ಮುಂದೆ ಬಂದರೆ ನೀನು ಹೇಳುತ್ತೀಯೆ: ‘ದಯವಿಟ್ಟು ಕಷ್ಟ ತೆಗೆದುಕೊಳ್ಳಬೇಡಿ. ನನಗೇನೂ ಬೇಕಾಗಿಲ್ಲ. ತಮ್ಮ ದರ್ಶನ ಪಡೆಯಲು ಮಾತ್ರ ಬಂದಿದ್ದೇನೆ.’ ಇದಕ್ಕೇ ಅಹೇತುಕ ಭಕ್ತಿ ಅಂತ ಹೆಸರು. ನಿನಗೆ ಭಗವಂತನಿಂದ ಏನೂ ಬೇಕಾಗಿಲ್ಲ. ಸುಮ್ಮನೇ ನೀನೇ ಆತನನ್ನು ಪ್ರೀತಿಸುತ್ತೀಯೆ.’’

### ಭಕ್ತಿ-ವಿವೇಕ-ವೈರಾಗ್ಯ

‘‘ಮುಖ್ಯವಾಗಿ ಭಗವಂತನಲ್ಲಿ ರಾಗಾಭಕ್ತಿ ಬೆಳಸಿಕೊಳ್ಳಬೇಕು. ವಿವೇಕ ವೈರಾಗ್ಯಗಳನ್ನು ವೃದ್ಧಿಗೊಳಿಸಬೇಕು.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೬)*

ಶ್ರೀರಾಮಕೃಷ್ಣರು ಇಲ್ಲಿ ಭಕ್ತಿ, ವಿವೇಕ ಮತ್ತು ವೈರಾಗ್ಯ ಇವುಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಈ ಮೂರೂ ಪರಸ್ಪರ ಪೂರಕಗಳು. ವಿವೇಕದಿಂದ ವೈರಾಗ್ಯವೂ, ವೈರಾಗ್ಯದಿಂದ ಭಕ್ತಿಯೂ ಮತ್ತು ಭಕ್ತಿಯಿಂದ ವೈರಾಗ್ಯವೂ ಅಧಿಕವಾಗುತ್ತದೆ. ‘ಪಂಚದಶಿ’ಯಲ್ಲಿ ಹೇಳಲಾಗಿದೆ: **ವಿವೇಕಬೋಧೋಪರಮಾಃ ಸಹಾಯಾಸ್ತೇ ಪರಸ್ಪರಮ್ ॥** *(೬.೨೭೬)* ‘ವಿವೇಕ, ಜ್ಞಾನ ಮತ್ತು ವೈರಾಗ್ಯ ಇವು ಪರಸ್ಪರ ಸಹಾಯಕಗಳು.’ ಇಲ್ಲಿ ಭಕ್ತಿಯ ಬದಲು ಆತ್ಮಜ್ಞಾನದ ಪ್ರಸ್ತಾಪವಿದೆ. ವಿವೇಕದಿಂದ ಆತ್ಮನ ಅರಿವು ವೃದ್ಧಿಯಾಗುತ್ತದೆ. ಅದರಿಂದ ವಿಷಯಾಸಕ್ತಿಯು ಕಡಿಮೆಯಾಗುತ್ತದೆ. ರಾಮಾನುಜ ಸಿದ್ಧಾಂತದಲ್ಲಿ ಏಳು ಸಾಧನೆಗಳ ಪ್ರಸ್ತಾಪವಿದೆ: ವಿವೇಕ, ವಿಮೋಕ, ಅಭ್ಯಾಸ, ಕ್ರಿಯಾ, ಕಲ್ಯಾಣ, ಅನವಸಾದ ಮತ್ತು ಅನುದ್ಧರ್ಷ. ಇಲ್ಲಿ ವಿವೇಕವೆಂದರೆ ಶುದ್ಧ ಸಾತ್ತ್ವಿಕ ಆಹಾರವನ್ನು ಸ್ವೀಕರಿಸುವುದು. ಜಾತಿ, ಆಶ್ರಯ ಮತ್ತು ನಿಮಿತ್ತ ದೋಷಗಳಿಂದ ಆಹಾರವು ಮುಕ್ತವಾಗಿರಬೇಕು. ಜಾತಿ ದೋಷವೆಂದರೆ ಅನಾರೋಗ್ಯಕರವೂ ಭೋಗಾಸಕ್ತಿಯನ್ನು ಕೆರ

ಳಿಸುವಂತಹದೂ ಆದ ಆಹಾರ. *(ನೋಡಿ: ಭಗವದ್ಗೀತೆ, ೧೭-೮,೯,೧೦)* ಆಶ್ರಯ ದೋಷವೆಂದರೆ ಯಾರು ಆಹಾರವನ್ನು ತಂದುಕೊಡುತ್ತಾರೋ, ತಯಾರಿಸುತ್ತಾರೋ ಅವರ ಚಾರಿತ್ರ್ಯ ಒಳ್ಳೆಯದಿಲ್ಲದಿದ್ದರೆ ಆಹಾರವೂ ದೋಷಯುಕ್ತವಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಶ್ರೀರಾಮಕೃಷ್ಣರ ಜೀವನದಲ್ಲಿ ಅನೇಕ ಘಟನೆಗಳಿವೆ. ಆಹಾರದಲ್ಲಿ ಉಗುರು, ಕೂದಲು ಅಥವಾ ರೋಗಾಣುಗಳು ಇದ್ದರೆ ಅದು ನಿಮಿತ್ತದೋಷವೆನಿಸುತ್ತದೆ. ಇಂತಹ ಶುದ್ಧ ಆಹಾರದಿಂದ ಮನಸ್ಸು ಶುದ್ಧವಾಗುತ್ತದೆ ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ: **'ಆಹಾರ ಶುದ್ಧೌ ಸತ್ತ್ವ ಶುದ್ಧಿಃ।'**

ವಿಮೋಕವೆಂದರೆ ವೈರಾಗ್ಯ. ವಿವಿಧ ಆಧ್ಯಾತ್ಮಿಕ ಸಾಧನೆಗಳೇ ಅಭ್ಯಾಸ. ಪಂಚಮಹಾಯಜ್ಞಗಳನ್ನೇ ಇಲ್ಲಿ ಕ್ರಿಯಾ ಎಂದು ಕರೆಯಲಾಗಿದೆ. ಕಲ್ಯಾಣವೆಂದರೆ ಐದು ನೈತಿಕ ಗುಣಗಳು: ಸತ್ಯ, ಆರ್ಜವ (ಒಳಗೊಂದು ಹೊರಗೊಂದು ಇಲ್ಲದಿರುವುದು) ಅಹಿಂಸೆ, ದಯಾ ಮತ್ತು ದಾನ. ಈ ಎಲ್ಲ ಗುಣಗಳನ್ನೂ ಪ್ರತಿಬಿಂಬಿಸುವ ಒಂದು ಸುಭಾಷಿತ ಶ್ಲೋಕವಿದೆ:

**ಸದಯಂ ಹೃದಯಂ ಯಸ್ಯ ಭಾಷಿತಂ ಸತ್ಯಭೂಷಿತಮ್ ।**
**ಕಾಯಃ ಪರಹಿತೇ ಯಸ್ಯ ಕಲಿಃ ಕುರ್ವೀತ ತಸ್ಯ ಕಿಮ್ ॥**

'ಯಾರ ಹೃದಯ ದಯಾಪೂರಿತವಾಗಿದೆಯೋ, ಯಾರ ನುಡಿ ಸತ್ಯಾಲಂಕೃತವಾಗಿದೆಯೋ, ಯಾರ ದೇಹ ಪರಹಿತಕ್ಕೆ ಸಾಧನವಾಗಿದೆಯೋ ಅವನಿಗೆ ಕಲಿ ಏನು ಮಾಡಲಾದೀತು !'

ಅನವಸಾದ ಮತ್ತು ಅನುದ್ಧರ್ಷ: 'ಸುಖ ಬಂದರೆ ಹಿಗ್ಗದೆ, ನೋವಿನಲ್ಲಿ ಕುಗ್ಗದೆ' ಇರುವುದು. ಇಲ್ಲಿ ಸ್ವಾಮಿ ವಿವೇಕಾನಂದರು ನೀಡುವ ಎಚ್ಚರಿಕೆಯನ್ನು ನೆನಪಿಸಿಕೊಳ್ಳಬಹುದು: 'Never let it run into excesses, because every excess will be followed by a reaction.' ('ಯಾವುದೂ ಅತಿರೇಕಕ್ಕೆ ಹೋಗದಂತೆ, ನೋಡಿಕೊಳ್ಳಿ. ಏಕೆಂದರೆ ಪ್ರತಿಯೊಂದು ಅತಿರೇಕಕ್ಕೂ ಅದಕ್ಕೆ ವಿರುದ್ಧವಾದ ಪ್ರತಿಕ್ರಿಯೆ ಇದ್ದೇ ಇರುತ್ತದೆ.') ನಮಗೆ ಅನುಕೂಲವಾದ ಪರಿಸ್ಥಿತಿಯಲ್ಲಿ ತುಂಬ ಹಿಗ್ಗಿದರೆ (ಅನುದ್ಧರ್ಷ), ಪ್ರತಿಕೂಲವಾದ ಸನ್ನಿವೇಶ ಒದಗಿದಾಗ ಅಷ್ಟೇ ಮನಸ್ಸು ಕುಗ್ಗುತ್ತದೆ (ಅನವಸಾದ). ನಾವು ಯಾವಾಗಲೂ ಮನಸ್ಸನ್ನು ಒಂದು ಸಮತೋಲ ಸ್ಥಿತಿಯಲ್ಲಿ ಇರಿಸಿಕೊಳ್ಳಲು ಪ್ರಯತ್ನಿಸಬೇಕು. ಒಬ್ಬ ವ್ಯಕ್ತಿ, ಅವನೊಡನೆ ಭಾರವಾಹಿ ಕತ್ತೆ ಇತ್ತು. ಒಂದು ದಿನ ಉಪ್ಪಿನ ಮೂಟೆಯನ್ನು ಕತ್ತೆಯ ಮೇಲೆ ಹೊರಿಸಿಕೊಂಡು ಹೊಗುತ್ತಿದ್ದನು. ದಾರಿಯಲ್ಲಿ ಒಂದು ನದಿ. ಅದನ್ನು ದಾಟುವಾಗ ಉಪ್ಪಿನ ಮೂಟೆ ನೀರಿಗೆ ತಗುಲಿ ಉಪ್ಪು ಕರಗಿ ಹೋಯಿತು. ಕತ್ತೆಗೆ ಎಲ್ಲಿಲ್ಲದ ಆನಂದ. ದಡ ಸೇರಿದ ಮೇಲೆ ಖುಷಿಯಿಂದ ನೆಗೆದಾಡುತ್ತಿತ್ತು. ಯಜಮಾನನು, 'ನಿನಗೆ ಸರಿಯಾಗಿ ಬುದ್ಧಿ ಕಲಿಸುತ್ತೇನೆ' ಎಂದು ಅಂದುಕೊಂಡನು. ಹಿಂದಿರುಗಿ ಬರುವಾಗ ಅದರ ಬೆನ್ನಿನ ಮೇಲೆ ಹತ್ತಿಯ ಮೂಟೆಯನ್ನು ಹೊರಿಸಿದನು. ಹತ್ತಿ ಹಗುರವಾಗಿದ್ದುದರಿಂದ ಕತ್ತೆ ಬೀಗುತ್ತ ಮುಂದುವರಿಯಿತು. ನದಿಯ ಮೂಲಕ ಬರುವಾಗ ಹತ್ತಿಯು ನೀರನ್ನು ಹೀರಿಕೊಂಡು ಕತ್ತೆಯು ಅತಿ ಭಾರದಿಂದ ಕುಸಿದು ಬಿತ್ತು. ಸುಖದಲ್ಲಿ ಹಿಗ್ಗಿದರೆ ದುಃಖದಲ್ಲಿ ಕುಗ್ಗಬೇಕಾಗುತ್ತದೆ.

### ಇಷ್ಟ ನಿಷ್ಠೆ

**ಶ್ರೀರಾಮಕೃಷ್ಣರು:** ''ಯಾವ ಮೂರ್ತಿಯ ಮೇಲೆ ಧ್ಯಾನ ಮಾಡಬೇಕು ಎಂಬುದಾಗಿ ನೀವು ಕೇಳುವುದಾದರೆ, ನನ್ನ ಉತ್ತರ: 'ಯಾವ ಮೂರ್ತಿ ನಿಮಗೆ ಹಿಡಿಸುತ್ತದೋ ಅದರ ಮೇಲೆ'. ಆದರೆ ಎಲ್ಲ ಮೂರ್ತಿಗಳೂ ಒಂದೇ ಭಗವಂತನ ವಿವಿಧ ರೂಪ ಎಂಬುದನ್ನು ಮಾತ್ರ ಚೆನ್ನಾಗಿ ಮನಸ್ಸಿಗೆ ಒತ್ತಿ ತಿಳಿಸಿ.

''ಯಾರ ಮೇಲೂ ದ್ವೇಷ ಇಟ್ಟುಕೊಂಡಿರಕೂಡದು. ಶಿವ, ಕಾಳಿ, ಹರಿ ಎಲ್ಲರೂ ಒಂದೇ ಭಗವಂತನ ಭಿನ್ನ ಭಿನ್ನ ರೂಪ ಮಾತ್ರ ಇದನ್ನು ಯಾರು ಅರಿತುಕೊಂಡಿದ್ದಾನೊ ಅವನೇ ಧನ್ಯ.

ಹೊರಗೆ ಶೈವ ಒಳಗೆ ಶಾಕ್ತ ;
ಮುಖದಿ ಹರಿಯ ನುತಿಪನು.''

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೬)*

ಮೇಲಿನ ಹೇಳಿಕೆಗಳು ಕೆಳಗಿನ ಸಂಸ್ಕೃತ ಶ್ಲೋಕವನ್ನು ನೆನಪಿಸುತ್ತವೆ:

**ಹರಿರೂಪೀ ಮಹಾದೇವೋ ಲಿಂಗರೂಪೀ ಜನಾರ್ದನಃ ।**
**ಈಶದಪ್ಯಂತರಂ ನಾಸ್ತಿ ಭೇದಕೃತ್ ನರಕಂ ವ್ರಜೇತ್ ॥**

'ಹರಿರೂಪಿಯಾದ ಮಹಾದೇವ ಲಿಂಗರೂಪಿಯಾದ ಜನಾರ್ದನ ಇವರಿಬ್ಬರಲ್ಲೂ ಸ್ವಲ್ಪವೂ ಭೇದವಿಲ್ಲ. ಯಾರು ಭೇದವನ್ನು ಕಾಣುತ್ತಾನೊ ಅವನಿಗೆ ನರಕವೇ ಗತಿ.'

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಪ್ರತಿಯೊಂದು ಧರ್ಮದಲ್ಲಿ ಮತ್ತು ದೇಶದಲ್ಲಿ ಇರುವ ದುರ್ಬಲ, ಅಪ್ರಬುದ್ಧ ಜನರು ತಮ್ಮ ಇಷ್ಟದೇವತೆಯನ್ನು ಈ ಒಂದು ರೀತಿಯಿಂದ ಮಾತ್ರ ಪ್ರೀತಿಸುವರು; ಅನ್ಯರ ಆದರ್ಶಗಳನ್ನು ತೆಗಳುವುದರ ಮೂಲಕ. ತನ್ನ ಇಷ್ಟದೇವತೆಯ ಮೇಲೆ ಅಷ್ಟೊಂದು ಆಸಕ್ತಿಯಿಂದ ಕೂಡಿದವನು, ತನ್ನ ಧರ್ಮದ ಮೇಲೆ ಅಷ್ಟೊಂದು ಶ್ರದ್ಧೆ ಭಕ್ತಿ ಇರುವವನು, ಇತರರ ಆದರ್ಶವನ್ನು ಕೇಳಿದರೆ ಸಾಕು, ಕಂಡರೆ ಸಾಕು, ಕಿಡಿಕಿಡಿ ಕಾರುತ್ತ ಕೂಗಾಡುವ ಧರ್ಮಾಂಧನಾಗುತ್ತಾನೆ. ಇಂತಹ ಪ್ರೀತಿಯನ್ನು ಯಜಮಾನನ ಆಸ್ತಿಯನ್ನು ಮತ್ತೊಬ್ಬರು ದೋಚಿಕೊಂಡು ಹೋಗದಿರಲಿ ಎಂದು ಕಾಯುವ ನಾಯಿಯ ಸ್ವಭಾವಕ್ಕೆ ಹೋಲಿಸಬಹುದು. ಆದರೆ ನಾಯಿಯ ಹುಟ್ಟುಗುಣ ಮನುಷ್ಯನ ಯುಕ್ತಿಗಿಂತ ಮೇಲು, ಏಕೆಂದರೆ